# ಮೈಸೂರು ದಸರೆಯ ಮೊದಲ ಅನುಭವ ಬಿಚ್ಚಿಟ್ಟ ಸಿಎಂ

## ಅಪ್ಪನ ಹೆಗಲ ಮೇಲೆ ಕುಳಿತು ಮೆರವಣಿಗೆ ನೋಡಿದ್ದೆ...

"ಆಗ ನನಗೆ 7–8 ವರ್ಷ ವಯಸ್ಸು. ದಸರಾ ಮೆರವಣಿಗೆ ನೋಡಲು ಅಪ್ಪನ ಜೊತೆ ಮೈಸೂರಿಗೆ ಹೋಗಿದ್ದೆ. ಅದುವೇ ನಾನು ಮೊಟ್ಟ ಮೊದಲ ಬಾರಿಗೆ ನೋಡಿದ ಮೆರವಣಿಗೆ, ದಸರಾ ಉತ್ಸವ.."

"ಬನ್ನಿಮಂಟಪದ ಬಳಿ ಇರುವ ಬಂಬೂ ಬಜಾರ್‌ನಲ್ಲಿ ಮೆರವಣಿಗೆ ನೋಡಲು ಮೆಟ್ಟಿಲುಗಳ ಮೇಲೆ ಅಪ್ಪನೊಂದಿಗೆ ಕಾದು ನಿಂತಿದ್ದೆ. ಅಂಬಾರಿಯ ಮೇಲೆ ಮಹಾರಾಜರು ಬರುವ ದೃಶ್ಯ ನೋಡಲು ಕಾತರನಾಗಿದ್ದೆ".

"ಆದರೆ, ಜನ ಜಂಗುಳಿಯಲ್ಲಿ ಮೆರವಣಿಗೆ ಕಾಣುತ್ತಲೇ ಇರಲಿಲ್ಲ. ಜೊತೆಗಿದ್ದ ಅಪ್ಪ, ಮಹಾರಾಜರು ಬಂದರು, ಮಹಾರಾಜರು ಬಂದರು ಕೈ ಮುಗಿ ಎಂದರು. ನನಗೇನೂ ಕಾಣುತ್ತಿಲ್ಲ ಎಂದೆ. ಆಗ ಅಪ್ಪ ಹೆಗಲ ಮೇಲೆ ಕೂರಿಸಿಕೊಂಡು ಇಡೀ ಮೆರವಣಿಗೆ ತೋರಿಸಿದರು. ಆ ದೃಶ್ಯ ಇಂದಿಗೂ ನನ್ನ ಕಣ್ಣ ಮುಂದಿದೆ. ನನ್ನ ಮೊದಲ ದಸರಾ ಮೆರವಣಿಗೆಯ ಅನುಭವವನ್ನು ಎಂದಿಗೂ ಮರೆಯಲೂ ಸಾಧ್ಯವಿಲ್ಲ".

ಮೊದಲ ಬಾರಿಗೆ ದಸರಾ ವೀಕ್ಷಿಸಿದ ಅನುಭವವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು "ಆಕಾಶವಾಣಿ"ಯೊಂದಿಗೆ ಹಂಚಿಕೊಂಡಿದ್ದು ಹೀಗೆ.

ಮೈಸೂರು ದಸರಾ ಉತ್ಸವದ ಹಿನ್ನೆಲೆಯಲ್ಲಿ ಆಕಾಶವಾಣಿಗೆ ವಿಶೇಷ ಸಂದರ್ಶನ ನೀಡಿದ ಮುಖ್ಯಮಂತ್ರಿಯವರು, ಬಾಲ್ಯದ ದಿನಗಳನ್ನು ಮೆಲುಕು ಹಾಕಿದರು.

"ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ, ಅಷ್ಟೇ ಅಲ್ಲ, ಎನ್‌ಸಿಸಿ ಕೆಡೆಟ್ ಆಗಿಯೂ ದಸರಾ ಮೆರವಣಿಗೆಯಲ್ಲಿ ಭಾಗವಹಿಸಿದ್ದೇನೆ. ಶಾಸಕನಾಗಿ, ಮಂತ್ರಿಯಾಗಿ, ಇದೀಗ ಮುಖ್ಯಮಂತ್ರಿಯಾಗಿ ದಸರಾ ಉತ್ಸವದಲ್ಲಿ ಅತ್ಯಂತ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದೇನೆ" ಎಂದು ಮುಖ್ಯಮಂತ್ರಿಯವರು ಹೇಳಿದರು.

ವಿಶ್ವಖ್ಯಾತ ಮೈಸೂರು ದಸರಾ ಉತ್ಸವಕ್ಕೆ ಸರ್ಕಾರ ಕೈಗೊಂಡಿರುವ ಸಿದ್ಧತೆ, ಆಯೋಜಿಸಿರುವ ಕಾರ್ಯಕ್ರಮಗಳು, ರಾಜ್ಯ, ಹೊರರಾಜ್ಯ, ದೇಶ, ವಿದೇಶದ ಪ್ರವಾಸಿಗರಿಗೆ ಒದಗಿಸಿರುವ ಸೌಲಭ್ಯಗಳು, ಎಲ್ಲವನ್ನೂ ಸಿದ್ದರಾಮಯ್ಯ ಅವರು ಸಂದರ್ಶನದ ವೇಳೆ ವಿವರಿಸಿದರು.

**ಸಂದರ್ಶನದ ಸಾರಾಂಶ ಹೀಗಿದೆ :**

ದಸರಾ ಮಹೋತ್ಸವ ಕರ್ನಾಟಕದ ಹೆಮ್ಮೆಯ ನಾಡಹಬ್ಬ. ಮೈಸೂರಿನ ದಸರಾ ಮಹೋತ್ಸವ ಹಲವು ವಿಶೇಷತೆಗಳನ್ನು ಮೈಗೂಡಿಸಿಕೊಂಡಿದೆ. ಕರ್ನಾಟಕದ ಇತಿಹಾಸದಲ್ಲಿ ಅತ್ಯಂತ ವೈಭವದ ಆಡಳಿತ ನಡೆಸಿದ ವಿಜಯನಗರ ಅರಸರು ಆಚರಿಸುತ್ತಿದ್ದ ಹಬ್ಬ ಇದು. ವಿಜಯನಗರ ಸಾಮ್ರಾಜ್ಯದ ನಂತರ, ಮೈಸೂರು ಅರಸರು ಈ ಹಬ್ಬವನ್ನು ಮುಂದುವರಿಸಿಕೊಂಡು ಬಂದರು.

ಅದೇ ಸಂಪ್ರದಾಯ, ಪರಂಪರೆಯನ್ನು ಉಳಿಸಿಕೊಂಡು, ಬಹಳ ಅರ್ಥಪೂರ್ಣವಾಗಿ ಈಗ ಆಚರಿಸಲಾಗುತ್ತಿದೆ. ಹಿಂದಿನ ವೈಭವ ಹಾಗೂ ಸಾಂಪ್ರದಾಯಿಕತೆಗೆ ಯಾವುದೇ ಕುಂದು ಬರದಂತೆ, ರಾಜ್ಯ ಸರ್ಕಾರ ದಸರಾ ಮಹೋತ್ಸವವನ್ನು ಆಚರಿಸುತ್ತಿದೆ.

ಪ್ರತಿವರ್ಷದಂತೆ ದಸರಾ ಮಹೋತ್ಸವ ಆಚರಿಸಲು ಉನ್ನತಾಧಿಕಾರ ಸಮಿತಿ ಇರುತ್ತದೆ. ಇಲ್ಲಿ ಕೈಗೊಂಡ ನಿರ್ಣಯಗಳಂತೆ, ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದ ಕಾರ್ಯಕಾರಿ ಸಮಿತಿ ಹಾಗೂ ಜಿಲ್ಲಾಧಿಕಾರಿಗಳ ನೇತೃತ್ವದ 17 ಉಪಸಮಿತಿಗಳನ್ನು ರಚನೆ ಮಾಡಲಾಗಿದೆ. ಈ ಸಮಿತಿಗಳು ಕಾರ್ಯಕ್ರಮಗಳನ್ನು ರೂಪಿಸಿ, ಕಾರ್ಯಕಾರಿ ಸಮಿತಿಯ ಮಾರ್ಗದರ್ಶನದಲ್ಲಿ ಹಾಗೂ ಕಾರ್ಯಕಾರಿ ಸಮಿತಿಯ ನಿರ್ದೇಶನದಂತೆ ಕೆಲಸ ಮಾಡುತ್ತವೆ.

ದಸರಾ ಮಹೋತ್ಸವವನ್ನು ಆಚರಿಸಲು ರಾಜ್ಯ ಸರ್ಕಾರ 2017 ನೇ ಸಾಲಿನಲ್ಲಿ ರೂ. 15 ಕೋಟಿ ಅನುದಾನ ಮೀಸಲಿಟ್ಟಿದ್ದು, ವಿವಿಧ ಕಾರ್ಯಕ್ರಮಗಳಿಗೆ ರೂ 13.5 ಕೋಟಿ ರೂ. ಹಣ ನಿಗದಿಗೊಳಿಸಲಾಗಿದೆ. ಚಾಮರಾಜನಗರದಲ್ಲಿ ದಸರಾ ಆಯೋಜನೆಗೆ 1 ಕೋಟಿ ರೂ., ಹಾಗೂ ಶ್ರೀರಂಗಪಟ್ಟಣದಲ್ಲಿ ದಸರಾ ಆಚರಣೆಗೆ ರೂ. 50 ಲಕ್ಷ ರೂ.ಗಳನ್ನು ಮೀಸಲಿಡಲಾಗಿದೆ.

ದಸರಾ ನಾಡಹಬ್ಬ ಆಗಿರುವುದರಿಂದ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯುತ್ತದೆ. ಮೈಸೂರು ದಸರಾ ನೋಡಲು ಜಗತ್ತಿನ ನಾನಾ ಭಾಗಗಳಿಂದ ಪ್ರವಾಸಿಗರು ಬರುತ್ತಾರೆ.

ಬಹು ಸಂಸ್ಕೃತಿಯ ಜನರು ಪಾಲ್ಗೊಳ್ಳುವ 10 ದಿನಗಳ ವೈಭವದ ಹಬ್ಬಕ್ಕೆ ಮೈಸೂರನ್ನು ಅಲಂಕರಿಸುವುದು, ಜನಾಕರ್ಷಣೆಯ ಕಾರ್ಯಕ್ರಮಗಳನ್ನು ರೂಪಿಸುವುದು ಮುಖ್ಯ ಧ್ಯೇಯವಾಗಿದೆ.

## ವಿಶ್ವ ಪ್ರವಾಸೋದ್ಯಮ ದಿನ :

ಇದೇ ಮೊದಲ ಬಾರಿಗೆ ವಿಶ್ವ ಪ್ರವಾಸೋದ್ಯಮ ದಿನವನ್ನು ಮೈಸೂರಿನಲ್ಲಿ ಆಚರಣೆ ಮಾಡುತ್ತಿದ್ದು, ನಗರದ ಪ್ರಮುಖ ರಸ್ತೆ ಡಿ. ದೇವರಾಜ ಅರಸು ರಸ್ತೆಯಲ್ಲಿ "ಓಪನ್ ಸ್ಟ್ರೀಟ್ ಫೆಸ್ಟಿವಲ್" ಆಯೋಜಿಸಲಾಗುತ್ತಿದೆ. ಪ್ರವಾಸೋದ್ಯಮ ಇಲಾಖೆ ಪ್ರಚಾರದ ಜವಾಬ್ದಾರಿ ವಹಿಸಿಕೊಂಡು ದೇಶದೆಲ್ಲೆಡೆ ಮಾಧ್ಯಮಗಳ ಮೂಲಕ ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ತನ್ನ ಪ್ರವಾಸಿ ಸ್ನೇಹಿ ಚಟುವಟಿಕೆಗಳನ್ನು ಜಗತ್ತಿಗೆ ತಿಳಿಸುತ್ತಿದೆ.

ಈ ಬಾರಿ ದಸರಾ ಉತ್ಸವವನ್ನು ಸರಳವಾಗಿ ಆಚರಿಸುವ ತೀರ್ಮಾನ ಕೈಗೊಳ್ಳಲಾಗಿತ್ತು. ಅದೃಷ್ಟವಶಾತ್ ಆಗಸ್ಟ್, ಸೆಪ್ಟೆಂಬರ್ ತಿಂಗಳಿನಲ್ಲಿ ರಾಜ್ಯಾದ್ಯಂತ ಉತ್ತಮ ಮಳೆಯಾಗಿದೆ. ಜಲಾಶಯಗಳು ಪೂರ್ಣ ಪ್ರಮಾಣದಲ್ಲಿ ಭರ್ತಿ ಆಗದಿದ್ದರೂ ರೈತರ ಮೊಗದಲ್ಲಿ ಮಳೆ ಮಂದಹಾಸ ಮೂಡಿಸಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಪರಿಸ್ಥಿತಿ ಸುಧಾರಿಸಿದೆ. ಹೀಗಾಗಿ ದಸರಾ ಉತ್ಸವವನ್ನು ಸ್ವಲ್ಪ ವಿಜೃಂಭಣೆಯಿಂದಲೇ ಮಾಡುವಂತೆ ಸೂಚಿಸಿದ್ದೇನೆ.

## ಮುಖ್ಯಮಂತ್ರಿಯಾಗಿ ಐದನೇ ಬಾರಿಗೆ ದಸರಾ ಉತ್ಸವದಲ್ಲಿ ಭಾಗವಹಿಸುತ್ತಿದ್ದೇನೆ.

ಮೈಸೂರು ಅರಮನೆಗಳ ನಗರ. ಮೊದಲಿನಿಂದಲೂ ಪ್ರವಾಸಿಗರ ನೆಚ್ಚಿನ ತಾಣ. ಚಾಮುಂಡಿ ಬೆಟ್ಟ, ರಂಗನತಿಟ್ಟು, ಬೃಂದಾವನ ಉದ್ಯಾನವನ, ಕೆಆರೆಸ್ ಅಣೆಕಟ್ಟು ಮತ್ತಿತರ ಸ್ಥಳಗಳ ವೀಕ್ಷಣೆಗೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಹೀಗಾಗಿ ಪ್ರವಾಸೋದ್ಯಮದ ಬೆಳವಣಿಗೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ.

ಸೆಪ್ಟೆಂಬರ್ 21ರಂದು ಬೆಳಗ್ಗೆ 8.30ಕ್ಕೆ ನಿತ್ಯೋತ್ಸವ ಕವಿ ಪ್ರೊ. ಕೆ.ಎಸ್. ನಿಸಾರ್ ಅಹಮದ್ ಅವರು ಚಾಮುಂಡಿ ಬೆಟ್ಟದಲ್ಲಿ ದಸರಾ ಉತ್ಸವದ ಉದ್ಘಾಟನೆ ನೆರವೇರಿಸುವರು. ಅದೇ ದಿನ ವಸ್ತುಪ್ರದರ್ಶನ ಆರಂಭವಾಗಲಿದೆ. ಅರಮನೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೂ ಚಾಲನೆ ಸಿಗಲಿದೆ. ಹತ್ತು ದಿನಗಳ ಕಾಲ ನಡೆಯುವ ಆ ಕಾರ್ಯಕ್ರಮದಲ್ಲಿ ದೇಶ, ವಿದೇಶದ ಕಲಾವಿದರು ಭಾಗವಹಿಸಲಿದ್ದಾರೆ. ಯುವ ದಸರೆ, ಚಿತ್ರೋತ್ಸವ ಕೂಡ ಆಕರ್ಷಣೀಯವಾಗಿರಲಿದೆ.

## ಗಣರಾಜ್ಯೋತ್ಸವ ಪರೇಡ್ ಮಾದರಿ :

ವಿಜಯದಶಮಿ ಮೆರವಣಿಗೆಯು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ. ಈ ಬಾರಿ ಮೆರವಣಿಗೆಯನ್ನು ದೆಹಲಿಯ ರಾಜಪಥದಲ್ಲಿ ನಡೆಯುವ ಗಣರಾಜ್ಯೋತ್ಸವ ಪರೇಡ್ ಮಾದರಿಯಲ್ಲಿ ಸಂಘಟಿಸಲು ಸಿದ್ಧತೆ ನಡೆದಿದೆ. ವಿವಿಧ ಕಲಾಪ್ರಕಾರದ ಸುಮಾರು 40 ತಂಡಗಳು, ಶ್ರೀಲಂಕಾ ಹಾಗೂ ಬಾಂಗ್ಲದೇಶದ ಎರಡು ಕಲಾತಂಡಗಳು ಭಾಗವಹಿಸಲಿವೆ. 42 ಸ್ತಬ್ದಚಿತ್ರಗಳು ಮೆರವಣಿಗೆಯಲ್ಲಿ ಇರಲಿವೆ. ಅರ್ಥಪೂರ್ಣ ನಾಡಹಬ್ಬ ಆಚರಿಸಲು ಸಕಲ ರೀತಿಯಲ್ಲಿ ರಾಜ್ಯ ಸರ್ಕಾರ ಸಿದ್ಧತೆ ಮಾಡಿಕೊಂಡಿದೆ.

ದಸರೆಯ ಸಂದರ್ಭದಲ್ಲಿ ಏರ್ ಶೋಗೆ ಅವಕಾಶ ಮಾಡಿಕೊಡಿ. ಮೆರವಣಿಗೆಯಲ್ಲಿ ಭಾಗವಹಿಸಲು ರಕ್ಷಣಾ ಪಡೆಯ ಒಂದು ತುಕಡಿ ಕಳುಹಿಸಿ ಎಂದು ಕಳೆದ ವಾರ ದೆಹಲಿಗೆ ಹೋದಾಗ ರಕ್ಷಣಾ ಸಚಿವರನ್ನು ಭೇಟಿ ಮಾಡಿ ಮನವಿ ಮಾಡಿದ್ದೇನೆ. ಇದರಿಂದ ಮೆರವಣಿಗೆಗೆ ಹೊಸ ಮೆರುಗು ಬರುತ್ತದೆ ಎಂಬುದು ನನ್ನ ಅನಿಸಿಕೆ.

ಮೈಸೂರು ಸಾಂಸ್ಕೃತಿಕ ರಾಜಧಾನಿ, ಪ್ರವಾಸಿಗರ ನೆಚ್ಚಿನ ತಾಣ, ಅತಿಹೆಚ್ಚು ಪ್ರವಾಸಿಗರು ಅದರಲ್ಲಿಯೂ ವಿದೇಶಿ ಪ್ರವಾಸಿಗರು ಇಲ್ಲಿಗೆ ಭೇಟಿ ನೀಡುತ್ತಾರೆ. ಮೈಸೂರು ಆತಿಥ್ಯಕ್ಕೆ ಹೆಸರುವಾಸಿ. ದಸರಾ ಮಹೋತ್ಸವ ಮೈಸೂರಿನ ಹಿರಿಮೆ- ಗರಿಮೆಗಳನ್ನು ಸಾರುವ ನಾಡಿನ ಶ್ರೀಮಂತಿಕೆಯನ್ನು ಪರಿಚಯಿಸುವ, ಪ್ರವಾಸಿಗರನ್ನು ಆದರಿಸುವ ಹಬ್ಬವಾಗಿದೆ. ಇದಕ್ಕಾಗಿ ಮಹಾನಗರವನ್ನು ದಸರಾ ಮಹೋತ್ಸವಕ್ಕೆಂದೇ ವಿಶೇಷವಾಗಿ ಸಿದ್ಧ?ದಗೊಳಿಸಲಾಗುತ್ತಿದೆ. ನಗರದ ಮೂಲಸೌಕರ್ಯಕ್ಕಾಗಿ ವಿಶೇಷ ಅನುದಾನವನ್ನು ಬಿಡುಗಡೆಗೊಳಿಸಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ರಸ್ತೆಗಳು, ಪಾದಚಾರಿ ಮಾರ್ಗಗಳ ಕಾಮಗಾರಿಗಳನ್ನು ವ್ಯವಸ್ಥಿತವಾಗಿ ಮಾಡಲಾಗಿದೆ.

ಮೈಸೂರು ಬೆಳಕಿನ ಊರು. ವಿದ್ಯುತ್ ದೀಪಾಲಂಕಾರಗೊಂಡ ಅರಮನೆ ವಿಶ್ವ ಪ್ರಸಿದ್ಧವಾಗಿದೆ. ಮಿತ ವಿದ್ಯುತ್ ಬಳಕೆಯಲ್ಲಿ ರಾಜಮಾರ್ಗ, ಪ್ರಮುಖ ರಸ್ತೆಗಳು ಹಾಗೂ ವೃತ್ತಗಳನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿದೆ. ದಸರಾ ಮಹೋತ್ಸವಕ್ಕೆ ಆಗಮಿಸುವ ಎಲ್ಲ ಪ್ರವಾಸಿಗರಿಗೆ ನಗರವನ್ನು ಸುಂದರವಾಗಿ ತೋರಿಸಲು ಮೈಸೂರು ಕಲೆ ಸಂಸ್ಕೃತಿ ಹಾಗೂ ದಸರಾ ವೈಶಿಷ್ಟ್ಯತೆಗಳ ಚಿತ್ರಗಳನ್ನು ಗೋಡೆಗಳ ಮೇಲೆ ಚಿತ್ರಿಸಲಾಗಿದೆ.

## ಬನ್ನಿ, ದಸರಾ ಉತ್ಸವದಲ್ಲಿ ಪಾಲ್ಗೊಳ್ಳಿ :

ರಾಜ್ಯದಲ್ಲಿ ಉತ್ತಮ ಮಳೆಯಾಗುತ್ತಿದೆ. ಉತ್ತಮ ಬೆಳೆಯಾಗುವ ನಿರೀಕ್ಷೆ ಇದೆ. ನಾಡಹಬ್ಬ ದಸರಾ ಮಹೋತ್ಸವ ನಮ್ಮ ಹಿರಿಮೆ. ಇದು ಪ್ರತಿಯೊಬ್ಬ ನಾಗರಿಕರ ಮನ, ಮನೆಯ ಹಬ್ಬ. ಎಲ್ಲರಿಗೂ ದಸರಾ ಹಬ್ಬದ ಶುಭಾಶಯಗಳನ್ನು ಕೋರುತ್ತೇನೆ. ಮೈಸೂರಿಗೆ ಬನ್ನಿ, ದಸರಾ ಉತ್ಸವದಲ್ಲಿ ಪಾಲ್ಗೊಳ್ಳಿ ಎಂದು ಆಹ್ವಾನಿಸುತ್ತೇನೆ.

*****************